1019

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 25.

ಬೆಂಗಳೂರು, ಗುರುವಾರ, ಜೂನ್ ತಾ॥ 23, ಸನ್ 1904.

IIನ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ಗಳು ಮೆಗ್ಗೆ ಕೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಡಿ. ನಂಬರು 61ನೆ ಪ್ರಕಟನ ಪತ್ರಿಕೆ, ಸನ್ 1904ನೆಯ ಇಸವಿ ಜೂನ್ ತಾರೀಖು 20.

ಮೈಸೂರು ಲೋವರ್ ಸಕಂಡರಿ ಪರೀಕ್ಷೆ.

ಸನ್ 1903ನೆಯ ಇಸವಿ ಜನವರಿ 29ನೆ ತಾರೀಖು ಮೈಸೂರು ಗೆಜೆಟ್ಟಿನ 2ನೆ ಭಾಗದ 43ನೆ ಪುಟದಲ್ಲಿ ಪ್ರಕಟನಲ್ಪಟ್ಟಿರುವ ಸನ್ 1902ನೆ ಇಸವಿ ಡಿಸೆಂಬರು 22ನೆ ತಾರೀಖಿನ ಡಿ. ನಂಬರು 49ನೆ ಪ್ರಕಟನ ಪತ್ರಿಕೆಯಲ್ಲಿ ಸಂಸ್ಕೃತ-ಎರಡನೆಯ ಭಾಷೆ-"ವಿಕ್ರಮಾರ್ಕ ಚರಿತೆ (ಮೈಸೂರು ಇಲಾಖೆಯ ಭಾಷೆ) – 2ನೆಯ ಕಥೆಯಿಂದ ಕಡೆಯ ವರೆಗೆ" ಎಂದು ಬರದಿರುತ್ತೆ. ಇದಕ್ಕೆ ಬದಲಾಗಿ "ವಿಕ್ರಮಾರ್ಕ ಚರಿತೆ, 28ನೆಯ ಕಥೆಯಿಂದ 32ನೆಯ ಕಥೆ ವರಗೆ ಮತ್ತು ಪಂಚತಂತ್ರದಲ್ಲಿ 6 ಕಥೆಗಳು (ಇಲಾಖೆಯ ಭಾಷೆ)" ಎಂದು ಓದಬೇಕು.

ಹರ್ಬ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ ನಂ. 413.

ತಾರೀಖು 20ನೆ ಜೂನ್ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೋಲಾರ ಡಿಸ್ಟ್ರಿಕ್ಟು ಮಾಲೂರು ರೇಂಜು ಫಾರೆಸ್ಟ್‌ಬೀಟ್‌ಗಳಲ್ಲಿ ಈ ಕೆಳಗೆ ನಮೂದಿಸಿರುವ ತಪಶೀಲು ವಾರು 4 ಅಡಿ ತಾಂಡುಗಳು ಆಗಿ ಕೊಯಿದು ಲಾಟು ಕಟ್ಟಿರುವ ಹಳೇ ಮತ್ತು ಹೊಸ ಕ್ಯಾಸರಿನ ಸವುದೆ 1904ನೆ ಇಸವಿ ಜೂನ್ 27ನೆ ಸೋಮವಾರ ಮಧ್ಯಾನ್ಹ 2 ಘಂಟೆಗೆ ಮಾಲೂರು ಮುಸಾಫರ್ ಬಂಗ್ಲೆ ಬಳಿ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಒಹಿರಂಗವಾದ ಹರಾಜು ಮಾಡಲ್ಪಡುತ್ತೆ.—

ಫಾರೆಸ್ಟ್‌ಬೀಟ್ ಹೆಸರು ಅ ಥವಾ ಸ್ಥಳ.	ಬಿಕರಿಆಗುವ ಸ್ಥಳಕ್ಕೆ ಯಾ ನೇಮಿಸುವ ರೈಲ್ವೆ ಸ್ಟೇಷನ್‌ಗೆ ಫಾಸಲೆ.	ಸುಮಾರು ಸವುದೆ ಮೊತ್ತ ಟನ್‌ಗಳು.	ಷರಾ.
ಬೈಯಪ್ಪನಹಳ್ಳಿ ..	5 ಮೈಲಿ ಕೋಲಾರಕ್ಕೆ 16 ,, ಬವರಿಂಗಪೇಟೆಗೆ	20	68 ಸಲೆ ಅಡಿಗೆ ಒಂದು ಟನ್ ನಂತೆ ಭಾವಿಸತಕ್ಕದ್ದು.
ಯಕವಂತಪುರ ...	16 ,, ಮಾಲೂರಿಗೆ	40	
ಲಕ್ಷ್ಮಿಸಾಗರ ...	10 ,, ಡಿಟೋ	123 + 5	ಹಳೇದು ಮತ್ತು ಹೊಸದು.
ವಕ್ಕಲೇರಿ ...	5 ,, ತ್ಯಾಕಲ್ಲಿಗೆ ...	60 + 15	ಡಿಟೋ
ಮುಲ್ಲಪ್ಪನಹಳ್ಳಿ ...	4 ,, ಮಾಲೂರಿಗೆ ..	15	
ರಾಮಚಂದ್ರಪುರ ...	4 ,, ಡಿಟೋ .	5	
ಹೊಸಕುರಂಡಹಳ್ಳಿ .	4 ,, ಡಿಟೋ	49½	
ಕಾಡುಮುತ್ಸಂದ್ರ ..	8 ,, ಡಿಟೋ	5	
ಫಾರೆಸ್ಟ್‌ಲಾಡ್ಜ್ ..	¼ ,, ಡಿಟೋ	1¼	
ಜಮ್ಮಾ ..		335¾	

2. ಸದರಿ ಸವುದೇ ಕೊಂಡುಕೊಳ್ಳಲು ಇಷ್ಟವುಳ್ಳವರು ಎಲ್ಲಾ ಅಥವಾ ಯಾವ ಪ್ಲಾಟೇಷನ್ನಲ್ಲಿನ ಸೌದೆಗಾಗಲಿ ಟ್ಯ 1ಕ್ಕೆ ಇಷ್ಟೆಂದು ದರಖಾಸ್ತು ಮಾಡಬಹುದು.

3. ಹರಾಜು ಮಾಡುವ ಆಫಿಸರು ಯಾವ ಸವಾಲನ್ನೆ ಆಗಲಿ ಯಾವ ಕಾರಣವೂ ನಮೂದಿಸದೇ ತಿರಸ್ಕರಿಸಲು ಸ್ವತಂತ್ರರಾಗಿರುತ್ತಾರೆ.

4. ಪ್ರತಿಯೊಬ್ಬ ಸವಾಲುದಾರನು ಮುಂಗಡವಾಗಿ 50 ರೂಪಾಯಿ ತೇವಣಿ ಕಟ್ಟದೆ ಏನಃ ಸವಾಲು ಮಾಡಲೀಸುವದಿಲ್ಲ. ಅಂಗೀಕರಿಸದೆ ಇರುವ ಸವಾಲ್ದಾರರ ತೇವಣಿಯನ್ನು ಹರಾಜು ಖೈದಾದ ಕೂಡಲೆ ವಾಪಸು ಮಾಡಲಾಗುತ್ತೆ.

5. ಹರಾಜು ಖೈದಾದ ಕೂಡ್ಲೇ ಅಂಗೀಕರಿಸಲ್ಪಟ್ಟ ಸವಾಲುದಾರನು ಹರಾಜು ಮೊಬಲಗಿನಲ್ಲಿ ಕಾಲು ಹಿಸ್ಸೆಯನ್ನು ಪಾವತಿ ಮಾಡಿ ಬಾಕೀದನ್ನು ಈ ಮಾಹೆ ಅಖೈರು ವಳಗಾಗಿ ಪಾವತಿ ಮಾಡತಕ್ಕದ್ದು ತಪ್ಪಿದರೆ ಸವಾಲುದಾರನು ಪಡದ ಸವುದೆಯು ಪುನಃ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ಲುಕಸಾನಿಗೆ ಮೊದಲ್ ಸವಾಲುದಾರನನ್ನು ಗುರಪಡಿಸಲ್ಪಡುತ್ತೆ. ನಫೆ ಬಂದಲ್ಲಿ ಈತನ ಬಾಧ್ಯತೆ ಏನೂ ಇರುವದಿಲ್ಲ. ಶಿವಾಯು ಈತನ ತೇವಣಿ ಯೂ ಪಾವತಿ ಮಾಡಿದ ಇತರೇ ಮೊಬಲಗು ಸಹಾ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

6. ಪೂರಾ ಮೊಬಲಗು ಪಾವತಿ ಮಾಡಿದ ನಂತರ ಸದರಿ ಸವಾಲುದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳಿಗೆ ಬದ್ಧನಾಗಿ ಬಂದು ಕರಾರು ಬರದು ಕೊಡತಕ್ಕದ್ದು.

i. ತಾನು ಕಿಂತ್ತವಾರು ಸಾಗಿಸುವ ಸವುದಿಗೆ ರೇಂಜಾಫಿಸರು ಯಾ ಛಾರ್ಜಿನಲ್ಲಿರುವ ಫಾರೆಸ್ಟರಿಂದ ರಹದಾರಿ ಪಡದು ಸಾಗಿಸುವೆನೆಂದು.

ii. ಸೂರ್ಯಾಸ್ತಮಯವಾದ ನಂತರವಾಗಲಿ ಸೂರ್ಯೋದಯಕ್ಕೆ ಪೂರ್ವವಾಗಲಿ ಸವುದೆ ಸಾಗಿಸುವದಿಲ್ಲವೆಂದು.

iii. ತಾನಾಗಲಿ ತನ್ನ ಕಡೆಯವರಾಗಲಿ ಸವುದೆ ಸಾಗಿಸುವಲ್ಲಿ ಪ್ಲಾಟೇರ್ಷನ್ನಿನ ಗಿಡಮರಗಳು ಕಡಿಯುವದು ಯಾ ಹಾನಿಪಡಿಸುವದಿಲ್ಲವೆಂದು.

iv. ತಾನಾಗಲಿ ತನ್ನ ಕಡೆಯವರಾಗಲಿ ಪ್ಲಾಟೇರ್ಷ ಸರಹದ್ದಿನಲ್ಲಿ ಅಡಿಗೆ ಮಾಡುವದು ಮತ್ತು ಬಂಕಿ ಹೊತ್ತಿಸುವದು ಇಲ್ಲವೆಂದು.

v. ತಾನು ಸಾಗಿಸುವ ಸವುದೆ ಗಾಡಿಗಳು ರಹದಾರಿ ಸಹಿತ ಡಿಸ್ಟ್ರಿಕ್ಟ್ ಯಾ ಫಾರೆಸ್ಟ್ ಆಫಿಸರು ವಿಧಾಯಿಸುವ ಸ್ಥಳಗಳಲ್ಲಿ ಅಜವಾಯಿಷಿ ಬಗ್ಗೆ ಹಾಜರು ಪಡಿಸುತ್ತೇನೆಂದು.

vi. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಂದ ಮುನಾಸಬು ಕೊಡಲ್ಪಡುವ ವಾಯಿದೆಯಲ್ಲಿ ತಾನು ಪಡದ ವಿಷಯ್ಯ ಸವುದೆ ಸಾಗಿಸಿಕೊಳ್ಳುತ್ತೇವೆಂದು, ಆರೀತಿ ಮಾಡಲು ತೃಪ್ತಿಕರವಾದ ಕಾರಣವಿಲ್ಲದೆ ತಪ್ಪಿದಲ್ಲಿ ವುಳಿಯುವ ಸೌದೆ ಸರ್ಕಾರಕ್ಕೆ ಶೇರಿಸಿಕೊಳ್ಳಬಹುದೆಂದು.

7. ಸವುದೆ ಪಡದ ಸವಾಲ್ದಾರನು ಮೇಲೆ ನಮೂದಿಸಿರುವ ಷರತ್ತುಗಳ ಪ್ರಕಾರ ನಡಿಯುವೆನೆಂಬ ಖಾತರೀ ಬಗ್ಗೆ ಮೊದಲು ಕೊಟ್ಟ 50 ರೂಪಾಯಿ ತೇವಣಿ ಸೇರಿ 100 ರೂಪಾಯಿ ತೇವಣಿ ಇಡತಕ್ಕದ್ದು.

8. ಮೇಲ್ಕಂಡ ಷರತ್ತುಗಳಲ್ಲ್ಯಾವದಕ್ಕಾದರೂ ತಪ್ಪಿ ನಡವರೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಗೆ ಯುಕ್ತ ಕೋರಿದಂತೆ ತೇವಣಿ ಮೊಬಲಗು ಪೂರಾ ಆಗಲಿ ಅಥವಾ ಅದರಲ್ಲಿ ಯಾವ ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

ಎಂ. ಶ್ರೀನಿವಾಸರಾವ್,
ಆಕ್ಟಿಂಗ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ.

ನೋಟಿಫಿಕೇಷ್ನ.

ತಾರೀಖು 19ನೆ ಜೂ 1904.

ಇದರಿಂದ ಎಲ್ಲರಿಗೂ ತಿಳಿಯಪಡಿಸುವದೇನಂದರೆ :— ತುಮಕೂರು ಡಿಸ್ಟ್ರಿಕ್ಟಿನ ಈ ಇರೇಬಿನಲ್ಲಿ ಕಂಡ ತಾಲ್ಲೂಕುಗಳ

1. ತುಮಕೂರು.
2. ತಿಪಟೂರು.
   ತುರ್ವೇಕರ ಸಬ್ ತಾಲ್ಲೂಕು ಶೇರಿ.
3. ಕುಣಿಗಲ್.
4. ಪಾವಗಡ.
5. ಸಿರಾ.
6. ಚಿಕ್ಕನಾಯಿಕನಹಳ್ಳಿ.
7. ಗುಬ್ಬಿ

ಸ್ಟೇಟ್ ಫಾರೆಸ್ಟ್ಗಳು ಮತ್ತು ಪ್ಲಾಂಟೇರ್ಷಗಳಲ್ಲಿಯೂ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ಗಳಲ್ಲಿಯೂ, ಸರ್ಕಾರಿ ಅವ್ಯತಮಹಲ್ ಕಾವಲುಗಳೂ ಸೇರಿ ಸರ್ಕಾರಿ ವ್ಯವಸ್ಥೆಗೆ ಬಳಪಟ್ಟ ಜಮೀನು-ಗಳಲ್ಲಿಯೂ, ಇರುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1904ನೆ ಇಸವಿ ಜುಲೈ ಗುರೆ ಲಾಗಾಯತು 1906ನೆ ಜೂ 30ನೆ ತಾರೀಖಿನ ವರೆಗೆ ಕಡದು ಸಾಗಿಸಿಕೊಳ್ಳುವ ಹಕ್ಕು ದಾರಿಯು 1904ನೆ ಜುಲೈ 15ನೆ ತಾರೀಖಿನಲ್ಲಿ ತುಮಕೂರು ಮೊಕ್ಕಾಂನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಸಾಹೇಬರವರಿಂದಲಾಗಲಿ ಅಥವಾ ಡೆಪ್ಯೂಟಿ ಕಮಿಷನರ್ ಸಾಹೇಬರವರಿಂದ ನೇಮಿಸಲ್ಪಟ್ಟ ಇತರ ಆಫಿಸರಿಂದಲಾಗಲಿ ಒಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಷರಾ :—ಸ್ಟೇಟ್ ಫಾರೆಸ್ಟ್ಗಳು ಪ್ಲಾಂಟೇರ್ಷಗಳ ದೇಪೀಲ್ ಪ್ರತ್ಯೇಕವಾಗಿ ಹರಾಜು ಮಾಡಲ್ಪಡುತ್ತವೆ. ತಾಲ್ಲೂಕುಗಳ ಇತರ ಪ್ರದೇಶಗಳನ್ನು ಅವಶ್ಯವಿದ್ದರೆ ಸಮ್ಮತ್ತುವಾರು ಹರಾಜು ಮಾಡಲ್ಪಡುವದು.

(2) ಮೇಲ್ಕಂಡ ತಾರೀಖು ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸುತ್ತೆ. ಆ ದಿವಸ ಹರಾಜು ಆಖೈರು ಆಗದಿದ್ದರೆ ಎರಡನೆ ದಿವಸವೂ ಹರಾಜು ನಡಿಸುತ್ತೆ. ಹರಾಜು ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.